# ವಿಜಯನಗರ ಸಾಮ್ರಾಜ್ಯದಲ್ಲಿ ಪೋರ್ಚುಗೀಸ್ ಪ್ರವಾಸಿಗರು ಮತ್ತು ರಾಯಭಾರಿಗಳು (1500–1565): ಒಂದು ಐತಿಹಾಸಿಕ ವಿಶ್ಲೇಷಣೆ

**ಯಲ್ಲಪ್ಪ***

**DOI: https://doi.org/10.5281/zenodo.23096910**

**ABSTRACT**

16ನೇ ಶತಮಾನದ ಯುರೋಪಿಯನ್ ಇತಿಹಾಸ ಮತ್ತು ದಕ್ಷಿಣ ಭಾರತದ ಸಾಮ್ರಾಜ್ಯಶಾಹಿ ವಾಸ್ತವದ ಸಂಧಿಸ್ಥಳವನ್ನು ಪರೀಕ್ಷಿಸುತ್ತದೆ. ಡೊಮಿಂಗೊ ಪೇಸ್ ಮತ್ತು ಫೆರ್ನಾವೊ ನೂನೀಸ್ ಅವರ ಪ್ರಾಥಮಿಕ ವರದಿಗಳನ್ನು ವಿಶ್ಲೇಷಿಸುವ ಮೂಲಕ, ಈ ಅಧ್ಯಯನವು ಸಾಮ್ರಾಟ ಕೃಷ್ಣದೇವರಾಯ ಹಾಗೂ ಅಚ್ಯುತರಾಯನ ಕಾಲದ ವಿಜಯನಗರ ಸಾಮ್ರಾಜ್ಯದ ನಗರ ಜೀವನ, ಮಿಲಿಟರಿ ಲಾಜಿಸ್ಟಿಕ್ಸ್ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಮರುನಿರ್ಮಾಣ ಮಾಡುತ್ತದೆ. ಈ ಅಧ್ಯಯನವು ಪೋರ್ಚುಗೀಸ್ 'ಎಸ್ಟಾಡೊ ಡಾ ಇಂಡಿಯಾ' ಮತ್ತು 'ವಿಜಯನಗರ ಸಾಮ್ರಾಜ್ಯ' ನಡುವಿನ ಪರಸ್ಪರ ಸಂಬಂಧವನ್ನು ತೋರಿಸುತ್ತದೆ, ವಿಶೇಷವಾಗಿ ಅರೇಬಿಯನ್–ಪರ್ಷಿಯನ್ ಕುದುರೆ ವ್ಯಾಪಾರ ಮತ್ತು ಆ ಕಾಲದ ವಾಸ್ತುಶಿಲ್ಪದ ಅದ್ಭುತಗಳ ಮೇಲೆ ಕೇಂದ್ರೀಕರಿಸುತ್ತದೆ. ವಿಜಯನಗರ ಸಾಮ್ರಾಜ್ಯದ ಜೊತೆಗಿನ ವಾಣಿಜ್ಯ ಮೈತ್ರಿಯು ಹೇಗೆ ಒಂದು ಶತಮಾನಗಳ ಕಾಲ ಹಿಂದೂ ಮಹಾಸಾಗರದ ವ್ಯಾಪಾರದ ಮೇಲೆ ಪೋರ್ಚುಗೀಸರು ಹಿಡಿತ ಸಾಧಿಸಲು ನೆರವಾಯಿತು ಎಂಬುದನ್ನು ಇದು ವಿವರಿಸುತ್ತದೆ. ಇದರೊಂದಿಗೆ, ವಿಜಯನಗರದ ಮೇಲೆ ಪೋರ್ಚುಗೀಸರ ವ್ಯಾಪಾರದ ಅವಲಂಬನೆಯ ಕಾರಣಗಳನ್ನು ಹಾಗೂ ಕ್ರಿ.ಶ. 1565ರ ಪತನದ ನಂತರ ಪೋರ್ಚುಗೀಸರ ವಾಣಿಜ್ಯ ಪ್ರಭುತ್ವವು ಕುಂಠಿತಗೊಂಡ ಹಿನ್ನೆಲೆಯನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತದೆ. ಕ್ರಿ.ಶ. 1500 ರಿಂದ 1565ರ ವರೆಗಿನ ವಿಜಯನಗರದ ರಾಜಕೀಯ, ವಾಣಿಜ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ವಿದೇಶಿ ಮೂಲಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಸಹಾಯಕವಾಗಿದೆ.

* **ಯಲ್ಲಪ್ಪ,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮರಿಯಮ್ಮನಹಳ್ಳಿ, ಹೊಸಪೇಟೆ.

**KEYWORDS:** ವಿಜಯನಗರ ಸಾಮ್ರಾಜ್ಯ, ಪೋರ್ಚುಗೀಸ್ ರಾಯಭಾರಿಗಳು, ಶ್ರೀಕೃಷ್ಣದೇವರಾಯ, ಕುದುರೆ ವ್ಯಾಪಾರ, ಹಿಂದೂ ಮಹಾಸಾಗರ, ತಾಳಿಕೋಟೆ ಕದನ, ಮಹಾನವಮಿ ದಿಬ್ಬ.

**ಪೀಠಿಕೆ**

ವಿಜಯನಗರ ಸಾಮ್ರಾಜ್ಯವು (ಕ್ರಿ.ಶ. 1336–1646) ಮಧ್ಯಕಾಲೀನ ದಕ್ಷಿಣ ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಶಿಖರಪ್ರಾಯವಾದ ಅಧ್ಯಾಯವಾಗಿದೆ. ಅದರ ಉತ್ತುಂಗದ ಕಾಲದಲ್ಲಿ, ರಾಜಧಾನಿ ಹಂಪಿಯು ಜಾಗತಿಕ ವಾಣಿಜ್ಯದ ಪ್ರಮುಖ ಕೇಂದ್ರವಾಗಿದ್ದು, ಜಗತ್ತಿನ ಅತಿ ದೊಡ್ಡ ನಗರಗಳಲ್ಲಿ ಒಂದಾಗಿ ಗುರುತಿಸಿಕೊಂಡಿತ್ತು. 15ನೇ ಶತಮಾನದ ಅಂತ್ಯದಲ್ಲಿ ಜಲಮಾರ್ಗದ ಮೂಲಕ ಭಾರತಕ್ಕೆ ಬಂದ ಪೋರ್ಚುಗೀಸರು, ಕ್ರಿ.ಶ. 1510ರಲ್ಲಿ ಗೋವಾವನ್ನು ವಶಪಡಿಸಿಕೊಂಡ ನಂತರ ದಖನ್ ಪ್ರಾಂತದ ರಾಜಕೀಯ ಭೂದೃಶ್ಯದಲ್ಲಿ ಹೊಸ ಬದಲಾವಣೆಯನ್ನು ತಂದರು. ಗೋವಾದ ಪೋರ್ಚುಗೀಸ್ ಆಡಳಿತ ಮತ್ತು ವಿಜಯನಗರದ ನಡುವೆ ಬೆಳೆದ ರಾಜತಾಂತ್ರಿಕ ಹಾಗೂ ವಾಣಿಜ್ಯ ಸಂಬಂಧಗಳು ಕೇವಲ ಪರಸ್ಪರ ಹಿತಾಸಕ್ತಿಯಾಗಿರದೆ, ಅಂದಿನ ಷಾಹಿ ಸುಲ್ತಾನರ ವಿರುದ್ಧ ಮಿಲಿಟರಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

ಈ ಐತಿಹಾಸಿಕ ಘಟ್ಟವನ್ನು ಅಧ್ಯಯನ ಮಾಡಲು ಸಮಕಾಲೀನ ಪೋರ್ಚುಗೀಸ್ ಪ್ರವಾಸಿಗರು ಮತ್ತು ರಾಯಭಾರಿಗಳಾದ ಡುವಾರ್ಟೆ ಬಾರ್ಬೋಸಾ (ಕ್ರಿ.ಶ. 1516), ಡೊಮಿಂಗೊ ಪೇಸ್ (ಕ್ರಿ.ಶ. 1520), ಮತ್ತು ಫೆರ್ನಾವೊ ನೂನೀಸ್ (ಕ್ರಿ.ಶ. 1535–37) ಅವರ ಪ್ರತ್ಯಕ್ಷದರ್ಶಿ ವರದಿಗಳು ಅತ್ಯಂತ ವಿಶ್ವಾಸಾರ್ಹ ಪ್ರಾಥಮಿಕ ಆಧಾರಗಳಾಗಿವೆ. ಸ್ಥಳೀಯ ಪ್ರಶಸ್ತಿ ಶಾಸನಗಳಿಗಿಂತ ಭಿನ್ನವಾಗಿ, ಈ ಪೋರ್ಚುಗೀಸ್ ದಾಖಲೆಗಳು ಗೋವಾದ ಗವರ್ನರ್ ಅಥವಾ ಲಿಸ್ಬನ್‌ನ ರಾಜನಿಗಾಗಿ ಸಿದ್ಧಪಡಿಸಿದ ವಸ್ತುನಿಷ್ಠ ಗುಪ್ತಚರ ಮತ್ತು ವಾಣಿಜ್ಯ ವರದಿಗಳಾಗಿದ್ದವು (Sewell, 1900). ಇವು ವಿಜಯನಗರದ ಅಪಾರ ಸಂಪತ್ತು, ದಿನಗಟ್ಟಲೆ ನಡೆಯುತ್ತಿದ್ದ ಮಿಲಿಟರಿ ಪೆರೇಡ್‌ಗಳು, ಮಾರುಕಟ್ಟೆಗಳ ವೈಭವ ಹಾಗೂ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮೇಲೆ ವ್ಯಾಪಕ ಬೆಳಕನ್ನು ಚೆಲ್ಲುತ್ತವೆ. ರಾಜಧಾನಿ ಹಂಪಿಯ ವಿಸ್ತಾರ, ಅರಮನೆಯ ವಿನ್ಯಾಸ, ವಿಜಯದಶಮಿ ಉತ್ಸವದ ಆಚರಣೆ ಹಾಗೂ ಅರಸರ ಮಿಲಿಟರಿ ಕಾರ್ಯಾಚರಣೆಗಳ ಕುರಿತು ಈ ಪ್ರವಾಸಿಗರು ನೀಡಿರುವ ವಿವರಣೆಗಳು ವಿಜಯನಗರದ ಸುವರ್ಣ ಕಾಲವನ್ನು ಮರುನಿರ್ಮಾಣ ಮಾಡಲು ಅತ್ಯಗತ್ಯ ಆಧಾರಗಳಾಗಿವೆ.

ಸಂಶೋಧನಾ ಪ್ರಶ್ನೆ (Research Question): ಪೋರ್ಚುಗೀಸರ ವಾಣಿಜ್ಯ ಮತ್ತು ಮಿಲಿಟರಿ ಹಿತಾಸಕ್ತಿಗಳು—ವಿಶೇಷವಾಗಿ ಪರ್ಷಿಯನ್ ಕುದುರೆ ವ್ಯಾಪಾರದ

ಏಕಸ್ವಾಮ್ಯ—ವಿಜಯನಗರದ ಸಾಮಾಜಿಕ, ರಾಜಕೀಯ ಮತ್ತು ಮಿಲಿಟರಿ ಶ್ರೇಣಿಯ ಬಗ್ಗೆ ಅವರ ವರದಿಗಳ ಮೇಲೆ ಹೇಗೆ ಪ್ರಭಾವ ಬೀರಿದವು?

**ಸಾಹಿತ್ಯ ವಿಮರ್ಶೆ**

ವಿಜಯನಗರ ಮತ್ತು ಪೋರ್ಚುಗೀಸ್ ರಾಯಭಾರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ (Stein, 1989). ಡಾ. ಬಿ. ಎ. ಸಾಲೆತ್ತೊರೆಯವರು ತಮ್ಮ ಸಂಶೋಧನಾ ಕೃತಿಯಾದ "Social and Political Life in the Vijayanagara Empire (1346–1646 CE)" ಮತ್ತು "Karnataka's Trans–Oceanic Contacts" ಮೂಲಕ ಪಾಯಸ್, ನೂನಿಸ್ ಈ ವಿಷಯದ ಮೇಲಿನ ಮೂಲಭೂತ ಆಧುನಿಕ ಪಾಂಡಿತ್ಯವನ್ನು ರಾಬರ್ಟ್ ಸೆವೆಲ್ ಅವರು 1900ರಲ್ಲಿ ಪ್ರಕಟಿಸಿದ ತಮ್ಮ ಹರಿಕಾರ ಕೃತಿ 'A Forgotten Empire' ಮೂಲಕ ಸ್ಥಾಪಿಸಿದರು (Sewell, 1900). ಲಿಸ್ಬನ್‌ನ ದಾಖಲೆಗಳಲ್ಲಿದ್ದ ಪೋರ್ಚುಗೀಸ್ ಹಸ್ತಪ್ರತಿಗಳನ್ನು ಇಂಗ್ಲಿಷಿಗೆ ಅನುವಾದಿಸಿ, ಪೇಸ್ ಮತ್ತು ನೂನೀಸ್ ಅವರ ವರದಿಗಳನ್ನು ಜಾಗತಿಕ ಇತಿಹಾಸದ ಮುಂಚೂಣಿಗೆ ತಂದ ಕೀರ್ತಿ ಸೆವೆಲ್ ಅವರಿಗೆ ಸಲ್ಲುತ್ತದೆ. ತದನಂತರ, ಸಂಜಯ್ ಸುಬ್ರಹ್ಮಣ್ಯಂ ಅವರು 'ಸಂಪರ್ಕಿತ ಇತಿಹಾಸಗಳ' (Connected Histories) ವಿಧಾನದ ಮೂಲಕ ಪೋರ್ಚುಗೀಸ್ ಆರ್ಥಿಕ ಸಾಮ್ರಾಜ್ಯ ಹಾಗೂ ವಿಜಯನಗರದ ವಾಣಿಜ್ಯ ಸಂಬಂಧವನ್ನು ಜಾಗತಿಕ ಆಯಾಮದಲ್ಲಿ ವಿಶ್ಲೇಷಿಸಿದ್ದಾರೆ (Subrahmanyam, 2012). ಅನಿಲಾ ವರ್ಗೀಸ್ ಮತ್ತು ಅಣ್ಣಾ ಡಲ್ಲಾಪಿಕೋಲಾ ಅವರು ಪೋರ್ಚುಗೀಸ್ ವಿವರಣೆಗಳನ್ನು ಹಂಪಿಯ ಇಂದಿನ ಭೌತಿಕ ಅವಶೇಷಗಳೊಂದಿಗೆ ಹೋಲಿಸಿ ಕಲಾ ಇತಿಹಾಸದ ದೃಷ್ಟಿಕೋನವನ್ನು ವಿಸ್ತರಿಸಿದ್ದಾರೆ (Dallapiccola & Verghese, 2000). ಬರ್ಟನ್ ಸ್ಟೈನ್ ಅವರು ವಿಜಯನಗರದ ರಾಜಕೀಯ ರಚನೆ ಮತ್ತು 'ನಾಯಕ ವ್ಯವಸ್ಥೆ'ಯನ್ನು ಮತ್ತು ಬಾರ್ಬೋಸಾರಂತಹ ಪೋರ್ಚುಗೀಸ್ ಪ್ರವಾಸಿಗರ ವರದಿಗಳನ್ನು ಬಳಸಿ ವಿಜಯನಗರದ ರಾಜತಾಂತ್ರಿಕತೆ ಹಾಗೂ ಕುದುರೆ ವ್ಯಾಪಾರದ ಸಂಬಂಧಗಳನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ. ಈ ದಾಖಲೆಗಳ ಮೂಲಕ ಅವರು ಸಾಮ್ರಾಜ್ಯದ ಆರ್ಥಿಕ ಕಂದಾಯ ವ್ಯವಸ್ಥೆ, ಬಂದರುಗಳ ವಹಿವಾಟು, ಮಹಿಳೆಯರ ಉನ್ನತ ಸ್ಥಾನಮಾನ ಮತ್ತು ನವರಾತ್ರಿ ಉತ್ಸವದ ವೈಭವದ ನೈಜ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಮುಖ್ಯವಾಗಿ, ವಿದೇಶಿ ಪ್ರವಾಸಿಗರ ಬರಹಗಳನ್ನು ಕುರುಡಾಗಿ ನಂಬದೆ, ಅವುಗಳನ್ನು ಸ್ಥಳೀಯ ಶಾಸನಗಳು ಮತ್ತು ಸಾಹಿತ್ಯದೊಂದಿಗೆ ತಾಳೆ ನೋಡಿ ಅತ್ಯಂತ ವಸ್ತುನಿಷ್ಠ ಇತಿಹಾಸವನ್ನು ಸಂಶೋಧಿಸಿದ್ದಾರೆ. ಇದರ ಜೊತೆಗೆ ಕೆ.ಎ. ನೀಲಕಂಠ ಶಾಸ್ತ್ರಿಗಳು ತಮ್ಮ "Further Sources of Vijayanagara History" ಸಂಶೋಧನಾ ಗ್ರಂಥದಲ್ಲಿ ವಿಜಯನಗರದ ಇತಿಹಾಸ ಪುನರ್ನಿರ್ಮಾಣಕ್ಕಾಗಿ ಪೋರ್ಚುಗೀಸ್ ಪ್ರವಾಸಿಗರಾದ ಪೇಸ್, ನೂನಿಸ್ ಮತ್ತು ಬಾರ್ಬೋಸಾರ ಬರಹಗಳನ್ನು ಪ್ರಮುಖ ಆಕರಗಳಾಗಿ ಬಳಸಿದ್ದಾರೆ. ಈ ವರದಿಗಳ ಮೂಲಕ ಕೃಷ್ಣದೇವರಾಯನ ವ್ಯಕ್ತಿತ್ವ, ಹಂಪಿಯ ವೈಭವ, ಅಂದಿನ

ಸಾಮಾಜಿಕ ಪದ್ಧತಿಗಳು ಹಾಗೂ ನಾಯಂಕರ ಆಡಳಿತ ಮತ್ತು ಸೈನಿಕ ವ್ಯವಸ್ಥೆಯನ್ನು ಅವರು ವಿಶ್ಲೇಷಿಸಿದ್ದಾರೆ. ವಿದೇಶಿ ಬರಹಗಳಲ್ಲಿದ್ದ ಅತಿಶಯೋಕ್ತಿ ಹಾಗೂ ಧಾರ್ಮಿಕ ಪಕ್ಷಪಾತಗಳನ್ನು ಸ್ಥಳೀಯ ಶಾಸನಗಳು ಮತ್ತು ಸಾಹಿತ್ಯದೊಂದಿಗೆ ವಿಮರ್ಶಾತ್ಮಕವಾಗಿ ಹೋಲಿಸಿ, ಸತ್ಯಾಸತ್ಯತೆಯನ್ನು ಪರಿಶೀಲಿಸಿ ಇತಿಹಾಸ ರಚಿಸಿದ್ದಾರೆ.

**ಸಂಶೋಧನೆಯ ಗುರಿಗಳು ಮತ್ತು ಉದ್ದೇಶಗಳು**

1. ಡೊಮಿಂಗೊ ಪೇಸ್ ಮತ್ತು ಫೆರ್ನಾವೊ ನೂನೀಸ್ ಅವರ ದಿನಚರಿಗಳಲ್ಲಿರುವ ದತ್ತಾಂಶಗಳನ್ನು ವಿಜಯನಗರದ ಮಿಲಿಟರಿ ಮತ್ತು ನಗರ ಮೂಲಸೌಕರ್ಯದ ಆಧಾರದ ಮೇಲೆ ಸಂಯೋಜಿಸುವುದು.
2. ದಖನ್ ಸುಲ್ತಾನರ ವಿರುದ್ಧ ಅಶ್ವದಳದ ಪ್ರಾಬಲ್ಯವನ್ನು ಕಾಯ್ದುಕೊಳ್ಳುವಲ್ಲಿ, ಪೋರ್ಚುಗೀಸ್ ನಿಯಂತ್ರಿತ ಕುದುರೆ ವ್ಯಾಪಾರವು ವಿಜಯನಗರಕ್ಕೆ ಹೊಂದಿದ್ದ ಕಾರ್ಯತಂತ್ರದ ಮಹತ್ವವನ್ನು ಮೌಲ್ಯಮಾಪನ ಮಾಡುವುದು.
3. ಪೋರ್ಚುಗೀಸರ ಸಾಮಾಜಿಕ ಮತ್ತು ಆಚರಣಾ ಅವಲೋಕನಗಳ ವಿಶ್ವಾಸಾರ್ಹತೆಯನ್ನು ಅಳೆಯಲು, ಅವರು ನೀಡಿರುವ 'ಮಹಾನವಮಿ' ಹಬ್ಬದ ವಿವರಣೆಗಳನ್ನು ಇಂದಿನ ಭೌತಿಕ ಅವಶೇಷಗಳೊಂದಿಗೆ ಹೋಲಿಸುವುದು.

**ಸಂಶೋಧನಾ ವಿಧಾನಗಳು**

ಈ ಅಧ್ಯಯನವು ಗುಣಾತ್ಮಕ ಐತಿಹಾಸಿಕ–ತುಲನಾತ್ಮಕ ವಿನ್ಯಾಸವನ್ನು ಬಳಸುತ್ತದೆ:

- ಪ್ರಾಥಮಿಕ ಪಠ್ಯ ವಿಶ್ಲೇಷಣೆ: ಪೋರ್ಚುಗೀಸ್ ದಾಖಲೆಯಾದ 'Chronica dos reis de Bisnaga' ಪಠ್ಯದ ನಿಕಟ ಓದುವಿಕೆ ಮತ್ತು ವಿಶ್ಲೇಷಣೆ.
- ಶಾಸನಶಾಸ್ತ್ರದ ಪುರಾವೆ: ವಿಜಯ ವಿಠಲ ಮತ್ತು ಹಜಾರ ರಾಮ ದೇವಾಲಯಗಳಲ್ಲಿ ಕಂಡುಬರುವ ಸಮಕಾಲೀನ ಕನ್ನಡ–ತೆಲುಗು ಶಾಸನಗಳೊಂದಿಗೆ ಪೋರ್ಚುಗೀಸ್ ವರದಿಗಳನ್ನು ತಾಳೆ ನೋಡುವುದು.
- ಪುರಾತತ್ವ ಸಂಬಂಧ: ಹಂಪಿಯ ಏಳು ಪದರಗಳ ಕೋಟೆ ಹಾಗೂ ನಗರ ವಿನ್ಯಾಸವನ್ನು ಪರಿಶೀಲಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ (ASI) ವರದಿಗಳನ್ನು ಅನ್ವಯಿಸುವುದು.

**ಐತಿಹಾಸಿಕ ಹಿನ್ನೆಲೆ ಮತ್ತು ಪೋರ್ಚುಗೀಸ್ ರಾಜತಾಂತ್ರಿಕ ಸಂಬಂಧಗಳು**

- **ಯುರೋಪಿಯನ್ನರ ಆಗಮನ ಮತ್ತು ಆರಂಭಿಕ ವಾಣಿಜ್ಯ ಸನ್ನಿವೇಶ**

ಕ್ರಿ.ಶ. 1453ರಲ್ಲಿ ಒಟ್ಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ (ಇಸ್ತಾಂಬುಲ್) ನಗರವನ್ನು ವಶಪಡಿಸಿಕೊಂಡಿದ್ದರಿಂದ ಏಷ್ಯಾ ಮತ್ತು ಯುರೋಪ್ ನಡುವಿನ ಸಾಂಪ್ರದಾಯಿಕ ಭೂಮಾರ್ಗದ ವ್ಯಾಪಾರವು ಕಡಿದುಹೋಯಿತು. ಏಷ್ಯಾದ

ಸಾಂಬಾರ ಪದಾರ್ಥಗಳು, ರೇಷ್ಮೆ ಮತ್ತು ಹತ್ತಿ ಬಟ್ಟೆಗಳ ಬೆಲೆ ದುಬಾರಿಯಾದಾಗ, ಯುರೋಪಿನ ರಾಷ್ಟ್ರಗಳು ಪರ್ಯಾಯ ಸಮುದ್ರ ಮಾರ್ಗದ ಹುಡುಕಾಟಕ್ಕೆ ಇಳಿದವು. ಇದರ ಫಲವಾಗಿ, ಪೋರ್ಚುಗೀಸ್ ನಾವಿಕ ವಾಸ್ಕೋ ಡ ಗಾಮನು ಕ್ರಿ.ಶ. 1498 ಮೇ 20 ರಂದು ಭಾರತದ ಪಶ್ಚಿಮ ಕರಾವಳಿಯ ಕಲ್ಲಿಕೋಟೆಗೆ (ಕ್ಯಾಲಿಕಟ್) ಬಂದು ತಲುಪುವ ಮೂಲಕ ಹೊಸ ಜಲಮಾರ್ಗವನ್ನು ಆವಿಷ್ಕರಿಸಿದನು. ಇದು ಶತಮಾನಗಳಿಂದ ನಡೆಯುತ್ತಿದ್ದ ಭೂಮಾರ್ಗದ ಏಕಸ್ವಾಮ್ಯವನ್ನು ಮುರಿದು ಸಮುದ್ರ ವ್ಯಾಪಾರದ ಯುಗಕ್ಕೆ ನಾಂದಿ ಹಾಡಿತು (Subrahmanyam, 2012).

ವಿಜಯನಗರ ಸಾಮ್ರಾಜ್ಯದ ತುಳುವ ವಂಶದ ವೀರನರಸಿಂಹ ರಾಯನ ಕಾಲದಲ್ಲೂ ಪೋರ್ಚುಗೀಸರು ಪಶ್ಚಿಮ ತೀರದಲ್ಲಿ ತಮ್ಮ ವ್ಯಾಪಾರವನ್ನು ವಿಸ್ತರಿಸುತ್ತಿದ್ದರು. ಅಂದಿನ ಕಾಲದಲ್ಲಿ ಪಶ್ಚಿಮ ಘಟ್ಟದ ಸಾಂಬಾರ ಪದಾರ್ಥ ಹಾಗೂ ಯುದ್ಧ ಕುದುರೆಗಳ ವ್ಯಾಪಾರದ ಮೇಲೆ ಅರಬ್ ಮತ್ತು ಮುಸ್ಲಿಂ ವರ್ತಕರು ಬಿಗಿಹಿಡಿತ ಹೊಂದಿದ್ದರು. ಈ ವರ್ತಕರು ಬಿಜಾಪುರ ಹಾಗೂ ಇತರೆ ಬಹಮನಿ ಶಾಹಿ ಸುಲ್ತಾನರಿಗೆ ಉತ್ತಮ ತಳಿಯ ಕುದುರೆಗಳು ಮತ್ತು ಮದ್ದುಗುಂಡುಗಳನ್ನು ಪೂರೈಸುವ ಮೂಲಕ ವಿಜಯನಗರ ಸಾಮ್ರಾಜ್ಯದ ಭದ್ರತೆಗೆ ಮಿಲಿಟರಿ ಸವಾಲೊಡ್ಡಿದ್ದರು (Kamath, 2020).

- **ಶ್ರೀಕೃಷ್ಣದೇವರಾಯನ ಅವಧಿ ಮತ್ತು ಪೋರ್ಚುಗೀಸ್ ಮೈತ್ರಿ (1509–1529)**

ಅರಬ್ ವರ್ತಕರ ಕುದುರೆ ವ್ಯಾಪಾರದ ಏಕಸ್ವಾಮ್ಯವನ್ನು ಮುರಿಯಲು ಶ್ರೀಕೃಷ್ಣದೇವರಾಯನು ಪೋರ್ಚುಗೀಸ್ ಗವರ್ನರ್ ಅಫೊನ್ಸೊ ಡಿ ಅಲ್ಬುಕರ್ಕ್‌ನೊಂದಿಗೆ ರಾಜತಾಂತ್ರಿಕ ಮೈತ್ರಿ ಮಾಡಿಕೊಂಡನು. ಕ್ರಿ.ಶ. 1510ರಲ್ಲಿ ಪೋರ್ಚುಗೀಸರು ಬಿಜಾಪುರದ ಸುಲ್ತಾನನಿಂದ ಪ್ರಮುಖ ಬಂದರು ನಗರವಾದ ಗೋವಾವನ್ನು ವಶಪಡಿಸಿಕೊಳ್ಳುವಲ್ಲಿ ವಿಜಯನಗರದ ಮಿಲಿಟರಿ ಹಾಗೂ ವ್ಯೂಹಾತ್ಮಕ ಬೆಂಬಲ ಪ್ರಮುಖ ಕಾರಣವಾಗಿತ್ತು. ಗೋವಾವನ್ನು ವಶಪಡಿಸಿಕೊಂಡ ನಂತರ, ಕೃಷ್ಣದೇವರಾಯನು ತನ್ನ ಬಾರಕೂರಿನ ಸಾಮಂತನಾದ ರತ್ನಂಶೆಟ್ಟಿಯನ್ನು ಕ್ರಿ.ಶ. 1514ರಲ್ಲಿ ಅಲ್ಬುಕರ್ಕ್‌ನ ಬಳಿ ಅಧಿಕೃತ ಒಪ್ಪಂದಕ್ಕಾಗಿ ಕಳುಹಿಸಿದನು. ಈ ಒಪ್ಪಂದದ ಪ್ರಕಾರ, ವಿಜಯನಗರವು ವಾರ್ಷಿಕವಾಗಿ 30 ಸಾವಿರ ವರಹಗಳನ್ನು ಪಾವತಿಸಲು ಸಮ್ಮತಿಸಿತು ಮತ್ತು ಪೋರ್ಚುಗೀಸರು ಎಲ್ಲಾ ಅರಬ್ಬಿ–ಪರ್ಷಿಯನ್ ಕುದುರೆಗಳನ್ನು ಬಾರ್ಕೂರು ಮತ್ತು ಭಟ್ಕಳ ಬಂದರುಗಳ ಮೂಲಕ ಕೇವಲ ವಿಜಯನಗರ ಸಾಮ್ರಾಜ್ಯಕ್ಕೆ ಪೂರೈಸಲು ಒಪ್ಪಿಕೊಂಡರು. ಈ ಒಪ್ಪಂದವನ್ನು ಕ್ರಿ.ಶ. 1522ರಲ್ಲಿ ಮತ್ತೊಮ್ಮೆ ನವೀಕರಿಸಲಾಯಿತು (Sewell, 1900; Subrahmanyam, 2012).

ವಿಜಯನಗರ ಮತ್ತು ಪೋರ್ಚುಗೀಸರ ನಡುವಿನ ಮೈತ್ರಿಗೆ ಅರೇಬಿಯನ್ ಮತ್ತು ಪರ್ಷಿಯನ್ ಕುದುರೆಗಳ ವ್ಯಾಪಾರವೇ ಪ್ರಧಾನ ಪ್ರೇರಕ ಶಕ್ತಿಯಾಗಿತ್ತು. ದಖನ್ ಪ್ರಾಂತ್ಯದ ಹವಾಮಾನವು ಉತ್ತಮ ತಳಿಯ ಯುದ್ಧ ಕುದುರೆಗಳ ತರಬೇತಿಗೆ ಪೂರಕವಾಗಿರದ ಕಾರಣ, ವಿಜಯನಗರವು ಮಿಲಿಟರಿ ಬಲವರ್ಧನೆಗಾಗಿ

ಸಂಪೂರ್ಣವಾಗಿ ಆಮದಿನ ಮೇಲೆ ಅವಲಂಬಿತವಾಗಿತ್ತು (Stein, 1989). ದೇಶಿಯ ತಳಿಗಳ ಕುದುರೆಗಳು ದೈಹಿಕವಾಗಿ ಗಿಡ್ಡವಾಗಿದ್ದು, ಶೀಘ್ರ ಚಾಲನೆಗೆ ಮತ್ತು ಯುದ್ಧ ಸಾಮಗ್ರಿಗಳನ್ನು ಹೊತ್ತುಕೊಂಡು ಬಹುದೂರದವರೆಗೆ ಸಂಚಾರಕ್ಕೆ ಸೂಕ್ತವಾಗಿರಲಿಲ್ಲ. ಅಲ್ಲದೇ ವಿದೇಶಿ ಕುದುರೆಗಳು ಶೀಘ್ರ ಚಾಲನೆಗೆ ಮತ್ತು ಬಹುದೂರದವರೆಗೆ ಸಂಚಾರಕ್ಕೆ ಸೂಕ್ತ ದೈಹಿಕವಾದ ಗಾತ್ರವನ್ನು ಹೊಂದಿದ್ದವು. ಮಳೆಗಾಲದಲ್ಲಿ ಕಾಲುಬೇನೆ ಅಥವಾ ಕಾಲುಸೆಳೆತ ರೋಗಬಾಧೆಯಿಂದ ಸಾವನ್ನಪ್ಪುತ್ತಿದ್ದವು. ಇದರಿಂದ ಅಶ್ವಪಡೆಗಳಿಗೆ ನಿರಂತರವಾಗಿ ಕುದುರೆಗಳ ಅವಶ್ಯಕತೆ ಇದ್ದೀತು. ಆದರೆ ವಿಜಯನಗರವು ಮಳೆಗಾಲದಲ್ಲಿ ಕಾಲುಸೆಳೆತ ರೋಗಬಾಧೆಯಿಂದ ಸಾಯುತ್ತಿದ್ದ ಕುದುರೆಗಳ ಅಭಿವೃದ್ಧಿಗೆ ಗಮನ ನೀಡಲಿಲ್ಲ. ಏಕೆಂದರೆ ಪೋರ್ಚುಗೀಸರು ತಮ್ಮ ಸಾಂಬಾರ್ ಪದಾರ್ಥಗಳ ವ್ಯಾಪಾರದ ಏಕಸ್ವಾಮ್ಯ ಸಾಧಿಸಲು ಮತ್ತು ತಮಗೆ ಅನುಕೂಲಕರವಾದ ಕುದುರೆ ವ್ಯಾಪಾರವನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳುವ ಉದ್ದೇಶದಿಂದ ಪೋರ್ಚುಗೀಸ್ ಅಶ್ವವೈದ್ಯರನ್ನು ವಿಜಯನಗರ ಸಾಮ್ರಾಜ್ಯಕ್ಕೆ ಕಳುಹಿಸಲಿಲ್ಲ. ಇದು ವಿದೇಶಿ ಕುದುರೆ ತಳಿಗಳ ಅಭಿವೃದ್ಧಿಗೆ ಹಿನ್ನಡೆಯಾಯಿತು. ಪೋರ್ಚುಗೀಸರ ವ್ಯಾಪಾರ ಏಕಸ್ವಾಮ್ಯದಿಂದ ವಿಜಯನಗರವು ಅರಬ್ ವ್ಯಾಪಾರಿಗಳ ಸಂಪರ್ಕವು ಕಡಿತಗೊಂಡಿತು. ಅರಬ್ ವ್ಯಾಪಾರಿಗಳು ಧರ್ಮದ ಹೆಸರಿನಲ್ಲಿ ಬಹಮನಿ ಸುಲ್ತಾನರಿಗೆ ಫಿರಂಗಿಗಳನ್ನು ಮತ್ತು ಉತ್ತಮ ಗುಣಮಟ್ಟದ ಅರಬ್ ತಳಿಯ ಕುದುರೆಗಳನ್ನು ಮಾರಾಟ ಮಾಡಿದರು. ಇದರ ಜೊತೆಗೆ ವಿಜಯನಗರ ಸಾಮ್ರಾಜ್ಯವು ಸಮುದ್ರ ತೀರದ ಬಂದರು ವ್ಯಾಪಾರ ಮತ್ತು ಅಂತಾರಾಷ್ಟ್ರೀಯ ವ್ಯಾಪಾರವನ್ನು ಪೋರ್ಚುಗೀಸರಿಗೆ ಬಿಟ್ಟುಕೊಟ್ಟು ಬರೀ ಆಂತರಿಕ ವ್ಯಾಪಾರಕ್ಕೆ ಒತ್ತು ಕೊಟ್ಟು ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಕಳೆದುಕೊಂಡಿತು.

- **ಅಚ್ಯುತರಾಯ ಮತ್ತು ಅಳಿಯ ರಾಮರಾಯನ ಕಾಲದ ಒಪ್ಪಂದಗಳು (1529–1565)**

ಅಚ್ಯುತರಾಯನ ಆಳ್ವಿಕೆಯ ಅವಧಿಯಲ್ಲಿ (ಕ್ರಿ.ಶ. 1529–1542) ಸಾಮ್ರಾಜ್ಯದ ಒಳಗಡೆ ಆಂತರಿಕ ರಾಜಕೀಯ ಕಲಹಗಳು ತಾರಕಕ್ಕೇರಿದ್ದವು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಪೋರ್ಚುಗೀಸ್ ಗವರ್ನರ್ ಮಾರ್ಟಿನ್ ಅಫೊನ್ಸೊ ಡಿ ಸೌಸಾ, ಭಟ್ಕಳ ಮತ್ತು ಹೊನ್ನಾವರ ಬಂದರುಗಳ ಮೂಲಕ ನಿಯೋಗಗಳನ್ನು ಕಳುಹಿಸಿ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡನು. ತದನಂತರ, ಸದಾಶಿವರಾಯನ ಕಾಲದಲ್ಲಿ ಪ್ರಧಾನಿಯಾಗಿದ್ದ ಅಳಿಯ ರಾಮರಾಯನು ಕ್ರಿ.ಶ. 1547ರಲ್ಲಿ ಗೋವಾದ ಗವರ್ನರ್ ಡೊಮ್ ಜೋವೊ ಡಿ ಕ್ಯಾಸ್ಟ್ರೋ ಜೊತೆ ಅತ್ಯಂತ ನಿರ್ಣಾಯಕ ಮಿಲಿಟರಿ–ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ, ರಾಮರಾಯನು ಕುದುರೆ ವ್ಯಾಪಾರದ ಸಂಪೂರ್ಣ ಏಕಸ್ವಾಮ್ಯವನ್ನು ವಿಜಯನಗರ ಪಡೆದುಕೊಂಡು, ಬದಲಿಗೆ ಕರಾವಳಿಯ ಸಾಂಬಾರ ಪದಾರ್ಥಗಳ ವ್ಯಾಪಾರದ ಸಂಪೂರ್ಣ ನಿಯಂತ್ರಣವನ್ನು ಪೋರ್ಚುಗೀಸರಿಗೆ ಬಿಟ್ಟುಕೊಟ್ಟನು (Diwakar, 1968; Kamath, 2020).

## ಪ್ರಮುಖ ಪೋರ್ಚುಗೀಸ್ ಪ್ರವಾಸಿಗರು ಮತ್ತು ಅವರ ವರದಿಗಳು

- **ಡುವಾರ್ಟೆ ಬಾರ್ಬೋಸಾ**

ಬಾರ್ಬೋಸಾನು ಪೋರ್ಚುಗೀಸ್ ಕಂಪನಿಯಲ್ಲಿ ಭಾಷಾಂತರಕಾರನಾಗಿ ಸೇವೆ ಸಲ್ಲಿಸುತ್ತಾ, ಕ್ರಿ.ಶ. 1516ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿ ತನ್ನ ಪ್ರವಾಸ ಕಥನವನ್ನು ದಾಖಲಿಸಿದನು. ಆತ ವಿಜಯನಗರದ ವಿಸ್ತಾರ, ಜನದಟ್ಟಣೆ ಮತ್ತು ಹಂಪಿಯ ಜಾಗತಿಕ ವಜ್ರದ ವ್ಯಾಪಾರವನ್ನು ಕೊಂಡಾಡಿದ್ದಾನೆ. ಪೆಗುವಿನ ಮಾಣಿಕ್ಯಗಳು, ಚೀನಾದ ರೇಷ್ಮೆ, ಮತ್ತು ಮಲಬಾರದ ಕರಿಮೆಣಸು ಹಂಪಿಯ ಮಾರುಕಟ್ಟೆಗಳಲ್ಲಿ ಹೇಗೆ ಸಮೃದ್ಧವಾಗಿ ಮಾರಾಟವಾಗುತ್ತಿದ್ದವು ಎಂಬುದನ್ನು ಆತ ವಿವರಿಸಿದ್ದಾನೆ. ಬಾರ್ಬೋಸಾನು ವಿಜಯನಗರದ ಧಾರ್ಮಿಕ ಸಹಿಷ್ಣುತೆಯನ್ನು ಶ್ಲಾಘಿಸುತ್ತಾ, ಸಾರ್ವಜನಿಕ ಸ್ಥಳಗಳಲ್ಲಿ ಯಾರಿಗೂ ಅವರ ಜಾತಿ ಅಥವಾ ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುತ್ತಿರಲಿಲ್ಲ ಎಂದು ದಾಖಲಿಸಿದ್ದಾನೆ. ಸಮಾಜದಲ್ಲಿದ್ದ ಬ್ರಾಹ್ಮಣ ಸಮುದಾಯದ ಕುರಿತು ಬರೆಯುತ್ತಾ, ಅವರು ರಾಜಗುರುಗಳಾಗಿ, ಆಡಳಿತಗಾರರಾಗಿ, ವರ್ತಕರಾಗಿ ಮತ್ತು ಜಮೀನ್ದಾರರಾಗಿ ವಿವಿಧ ಸಾಮಾಜಿಕ–ಧಾರ್ಮಿಕ ಉನ್ನತ ಸ್ಥಾನಮಾನಗಳನ್ನು ಹೊಂದಿದ್ದರು ಎಂದು ಆತ ವಿಶ್ಲೇಷಿಸಿದ್ದಾನೆ.

- **ಕ್ರಿಸ್ಟೋವಾವೋ ಡಿ ಫೀರೆಡೋ**

ಫೀರೆಡೋ ಅವರು ಪೋರ್ಚುಗೀಸ್ ಗವರ್ನರ್ ಪರವಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಬಂದಿದ್ದ ಪ್ರಮುಖ ರಾಜತಾಂತ್ರಿಕ ಅಧಿಕಾರಿಯಾಗಿದ್ದರು. ಕ್ರಿ.ಶ. 1520ರ ಐತಿಹಾಸಿಕ ರಾಯಚೂರು ಕದನದಲ್ಲಿ ವಿಜಯನಗರಕ್ಕೆ ಬೇಕಾದ ಅತ್ಯುತ್ತಮ ತಳಿಯ ಅರಬ್ಬಿ ಕುದುರೆಗಳು, ಫಿರಂಗಿ ಹಾಗೂ ಸುಧಾರಿತ ಮದ್ದುಗುಂಡುಗಳನ್ನು ಪೂರೈಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಈ ಕದನದಲ್ಲಿ ಫೀರೆಡೋ ನೇತೃತ್ವದ ಪೋರ್ಚುಗೀಸ್ ಬಂದೂಕುಧಾರಿಗಳು (Musketeers) ಕೃಷ್ಣದೇವರಾಯನ ಪರವಾಗಿ ನೇರವಾಗಿ ಯುದ್ಧದಲ್ಲಿ ಭಾಗವಹಿಸಿ, ರಾಯಚೂರು ಕೋಟೆಯನ್ನು ಗೆಲ್ಲುವಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದ್ದರು (Sewell, 1900; Stein, 1989).

- **ಡೊಮಿಂಗೊ ಪೇಸ್ (ಕ್ರಿ.ಶ. 1520)**

ಶ್ರೀಕೃಷ್ಣದೇವರಾಯನ ಆಳ್ವಿಕೆಯ ಸುವರ್ಣ ಕಾಲದಲ್ಲಿ ಭೇಟಿ ನೀಡಿದ್ದ ಪೇಸ್, ತನ್ನ 'Chronica dos reis de Bisnaga' ಕೃತಿಯಲ್ಲಿ ವಿಜಯನಗರದ ಅತ್ಯಂತ ಭವ್ಯ ಚಿತ್ರಣವನ್ನು ನೀಡಿದ್ದಾನೆ (Sewell, 1900). ಕೃಷ್ಣದೇವರಾಯನ ವ್ಯಕ್ತಿತ್ವವನ್ನು ವರ್ಣಿಸುತ್ತಾ, "ರಾಜನು ಮಧ್ಯಮ ಎತ್ತರ, ಬಿಳಿ ಮೈಬಣ್ಣ ಹಾಗೂ ಆಕರ್ಷಕ ಶರೀರವನ್ನು ಹೊಂದಿದ್ದು, ಮಹಾನ್ ನ್ಯಾಯಾಧೀಶ ಹಾಗೂ ಧೀರ ಯೋಧನಾಗಿದ್ದಾನೆ" ಎಂದು ಬರೆದಿದ್ದಾನೆ. ಹಂಪಿ ನಗರದ ವಿಸ್ತಾರವನ್ನು ಅಂದಿನ ಜಗತ್ತಿನ ಪ್ರಸಿದ್ಧ ನಗರವಾದ ರೋಮ್‌ಗೆ ಹೋಲಿಸಿರುವ ಪೇಸ್, ನಗರವು ಏಳು

ಸುತ್ತಿನ ಭದ್ರವಾದ ಕೋಟೆಯಿಂದ ಸುತ್ತುವರೆದಿದೆ ಎಂದು ತಿಳಿಸಿದ್ದಾನೆ. ಬೀದಿಗಳಲ್ಲಿ ವಜ್ರ, ಮಾಣಿಕ್ಯ ಹಾಗೂ ಮುತ್ತುಗಳನ್ನು ರಾಶಿ ಹಾಕಿ ಮಾರುತ್ತಿದ್ದ ಮಾರುಕಟ್ಟೆಗಳ ಶ್ರೀಮಂತಿಕೆಯನ್ನು ಆತ ಕಣ್ಣಾರೆ ಕಂಡು ವರ್ಣಿಸಿದ್ದಾನೆ. ಕೃಷ್ಣದೇವರಾಯನು ಕೃಷಿಗಾಗಿ ನಿರ್ಮಿಸಿದ ಬೃಹತ್ ಜಲಾಶಯಗಳು, ಕಾಲುವೆಗಳು ಹಾಗೂ ಬುಕ್ಕಸಾಗರ ಮತ್ತು ರಾಮಸಾಗರ ಕೆರೆಗಳ ನೀರಾವರಿ ವ್ಯವಸ್ಥೆಯನ್ನು ಆತ ಮುಕ್ತಕಂಠದಿಂದ ಶ್ಲಾಘಿಸಿದ್ದಾನೆ.

**ಫೆರ್ನಾವೊ ನೂನೀಸ್ (ಕ್ರಿ.ಶ. 1535)**

ಕುದುರೆ ವರ್ತಕನಾಗಿ ಬಂದು ಅಚ್ಯುತರಾಯನ ಕಾಲದಲ್ಲಿ ಮೂರು ವರ್ಷಗಳ ಕಾಲ ರಾಜಧಾನಿಯಲ್ಲೇ ತಂಗಿದ್ದ ನೂನೀಸ್, ವಿಜಯನಗರದ ಸ್ಥಾಪನೆಯಿಂದ ಹಿಡಿದು ತನ್ನ ಸಮಕಾಲೀನ ಕಾಲದವರೆಗಿನ ರಾಜಕೀಯ ಏಳುಬೀಳುಗಳನ್ನು ವ್ಯವಸ್ಥಿತವಾಗಿ ದಾಖಲಿಸಿದ್ದಾನೆ. ಅಚ್ಯುತರಾಯನ ಕಾಲದ ಆಂತರಿಕ ದಂಗೆಗಳ ದಮನ ಹಾಗೂ ರಾಜನ ಗುಣಾವಗುಣಗಳ ಜೊತೆಗೆ, ಸಮಾಜದಲ್ಲಿ ಮಹಿಳೆಯರಿಗಿದ್ದ ವಿಶಿಷ್ಟ ಸ್ಥಾನಮಾನದ ಕುರಿತು ನೂನೀಸ್ ಅತ್ಯಂತ ಅಪರೂಪದ ಮಾಹಿತಿಯನ್ನು ನೀಡಿದ್ದಾನೆ. ಅರಮನೆಯ ಆವರಣದಲ್ಲಿ ಮಹಿಳೆಯರು ಕೇವಲ ಅಂತಃಪುರದ ಸದಸ್ಯರಾಗಿರದೆ, ಅವರು ಕುಸ್ತಿಪಟುಗಳಾಗಿ, ರಾಜನ ವೈಯಕ್ತಿಕ ಅಂಗರಕ್ಷಕಿಯರಾಗಿ, ಲೆಕ್ಕಿಗರಾಗಿ (Accountants), ಮತ್ತು ಜ್ಯೋತಿಷಿಗಳಾಗಿ ಅಧಿಕೃತ ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು ಎಂದು ಆತ ಉಲ್ಲೇಖಿಸಿದ್ದಾನೆ (Sewell, 1900).

**ಗಾರ್ಸಿಯಾ ಡಿ ಒರ್ಟಾ ಮತ್ತು ಇತರರು**

ಪ್ರಸಿದ್ಧ ಪೋರ್ಚುಗೀಸ್ ಸಸ್ಯವಿಜ್ಞಾನಿ ಮತ್ತು ವೈದ್ಯರಾಗಿದ್ದ ಗಾರ್ಸಿಯಾ ಡಿ ಒರ್ಟಾ ಅವರು ಕ್ರಿ.ಶ. 1563ರಲ್ಲಿ ಪ್ರಕಟಿಸಿದ ತಮ್ಮ ಕೃತಿಯಲ್ಲಿ ವಿಜಯನಗರದ ಆರ್ಥಿಕ ಸಮೃದ್ಧಿ, ಔಷಧೀಯ ಸಸ್ಯಗಳು ಮತ್ತು ಅಳಿಯ ರಾಮರಾಯನ ಆಸ್ಥಾನದ ವೈದ್ಯಕೀಯ ಪದ್ಧತಿಗಳನ್ನು ದಾಖಲಿಸಿದ್ದಾರೆ. ಇದರೊಂದಿಗೆ ಫಾದರ್ ಅಂತೋನಿಯೊ ಕ್ರಿಮಿನಾಲಿ ಅವರಂತಹ ಜೆಸ್ಯೂಟ್ ಮಿಷನರಿಗಳು ಕರಾವಳಿ ಬಂದರುಗಳಲ್ಲಿ ಸಂಚರಿಸಿ, ರಾಮರಾಯನ ಧಾರ್ಮಿಕ ಸ್ವಾತಂತ್ರ್ಯದ ನೀತಿಯನ್ನು ಪ್ರಶಂಸಿಸಿದ್ದಾರೆ.

**ವಿಶ್ಲೇಷಣಾತ್ಮಕ ಚರ್ಚೆ**

| ಆಯಾಮ | ಪೋರ್ಚುಗೀಸ್ ವರದಿಗಳ ಸಾರಾಂಶ | ಪುರಾತತ್ವ/ಐತಿಹಾಸಿಕ ಸಾಕ್ಷ್ಯಗಳು |
|---|---|---|
| ಮಿಲಿಟರಿ ಆರ್ಥಿಕತೆ (ಕುದುರೆ ವ್ಯಾಪಾರ) | ವಾರ್ಷಿಕವಾಗಿ 10,000ಕ್ಕೂ ಹೆಚ್ಚು ಪರ್ಷಿಯನ್–ಅರಬ್ಬಿ ಕುದುರೆಗಳ ಆಮದು; ಸುಲ್ತಾನರಿಗೆ ಮಾರದಂತೆ ನಿಷೇಧ (Sewell, 1900). | ಭಟ್ಕಳ, ಬಾರ್ಕೂರು ಶಾಸನಗಳು ಮತ್ತು ಕೃಷ್ಣದೇವರಾಯನ ಆಡಳಿತಾತ್ಮಕ ನೀತಿಗಳು (Subrahmanyam, 2012). |

| | | |
|---|---|---|
| ವಾಸ್ತುಶಿಲ್ಪ ಮತ್ತು ಆಚರಣೆ | ಮಹಾನವಮಿ ಉತ್ಸವದ ಮರದ ರಚನೆ, ಆನೆ-ಕುದುರೆಗಳ ಪೆರೇಡ್ ಮತ್ತು ನೃತ್ಯ ಪ್ರದರ್ಶನಗಳು (Sewell, 1900). | ಹಂಪಿಯ 'ಮಹಾನವಮಿ ದಿಬ್ಬ', ವಿಜಯ ವಿಠಲ ಮತ್ತು ಹಜಾರರಾಮ ದೇವಾಲಯದ ಮೇಲಿರುವ ವಿದೇಶಿ ರಾಯಭಾರಿಗಳು, ನರ್ತಕರು ಮತ್ತು ಅಶ್ವಸವಾರರ ಶಿಲ್ಪಕಲೆ (Dallapiccola & Verghese, 2000). |
| ಸಾಮಾಜಿಕ ರಚನೆ (ಮಹಿಳೆಯರು) | ಮಹಿಳಾ ಅಂಗರಕ್ಷಕಿಯರು, ಲೆಕ್ಕಿಗರು, ಜ್ಯೋತಿಷಿಗಳು ಮತ್ತು ಕುಸ್ತಿಪಟುಗಳ ಆಡಳಿತಾತ್ಮಕ ಪಾತ್ರ (Sewell, 1900). | ಸಮಕಾಲೀನ ವೀರಗಲ್ಲುಗಳು, ಕೆತ್ತನೆಗಳು ಮತ್ತು ಅರಮನೆಯ ಸಂಕೀರ್ಣದ ಪುರಾತತ್ವ ಉತ್ಖನನದ ಅವಶೇಷಗಳು (Kamath, 2020). |

**ಸಂಶೋಧನೆಯ ವ್ಯಾಪ್ತಿ ಮತ್ತು ಮಿತಿಗಳು**

- ವ್ಯಾಪ್ತಿ: ಈ ಸಂಶೋಧನೆಯು ಕಟ್ಟುನಿಟ್ಟಾಗಿ ತುಳುವ ರಾಜವಂಶದ ಉತ್ತುಂಗದ ಕಾಲಘಟ್ಟಕ್ಕೆ, ವಿಶೇಷವಾಗಿ ಕ್ರಿ.ಶ. 1500 ರಿಂದ 1565ರ ವರೆಗಿನ ಅವಧಿಗೆ ಸೀಮಿತವಾಗಿದೆ.
- ಮಿತಿಗಳು: ಲಭ್ಯವಿರುವ ಪ್ರಾಥಮಿಕ ಪಠ್ಯಗಳು 16ನೇ ಶತಮಾನದ ಪೋರ್ಚುಗೀಸ್ ಭಾಷೆಯಿಂದ ಇಂಗ್ಲಿಷಿಗೆ ಅನುವಾದಗೊಂಡ ಕೃತಿಗಳಾಗಿವೆ. ಯುರೋಪಿಯನ್ ಪ್ರವಾಸಿಗರು ಭಾರತೀಯ ಧಾರ್ಮಿಕ ಪದ್ಧತಿಗಳನ್ನು ಗ್ರಹಿಸುವಾಗ ಬಳಸಿದ 'ಮೂರ್ತಿಪೂಜೆ' (Idolatry) ಮುಂತಾದ ಪದಗಳ ಸಾಂಸ್ಕೃತಿಕ ಸೂಕ್ಷ್ಮತೆಗಳನ್ನು ಎಚ್ಚರಿಕೆಯಿಂದ ಮರು-ವ್ಯಾಖ್ಯಾನಿಸಬೇಕಾದ ಅಗತ್ಯವಿದೆ.

**ಉಪಸಂಹಾರ**

ಪೋರ್ಚುಗೀಸ್ ಪ್ರವಾಸಿಗರು ಮತ್ತು ರಾಯಭಾರಿಗಳ ವರದಿಗಳು ಕೇವಲ ಸಾಹಿತ್ಯಿಕ ಟಿಪ್ಪಣಿಗಳಲ್ಲ; ಅವು ಕ್ರಿ.ಶ. 1565ರ ತಾಳಿಕೋಟೆ ಕದನದಲ್ಲಿ ಧ್ವಂಸಗೊಂಡ ಒಂದು ವೈಭವೋಪೇತ ನಗರದ ಚರಿತ್ರೆಯನ್ನು ವೈಜ್ಞಾನಿಕವಾಗಿ ಮರುನಿರ್ಮಾಣ ಮಾಡಲು ನಮಗೆ ಸಹಾಯ ಮಾಡುವ ಐತಿಹಾಸಿಕ ಕೊಂಡಿಗಳಾಗಿವೆ. ವಿಜಯನಗರ ಮತ್ತು ಪೋರ್ಚುಗೀಸರ ನಡುವಿನ ಸಂಬಂಧವು ಕೇವಲ ರಾಜತಾಂತ್ರಿಕತೆಯಾಗಿರದೆ, ಅದು ಕುದುರೆ ಮತ್ತು ಸಾಂಬಾರ ಪದಾರ್ಥಗಳ ವ್ಯಾಪಾರದಿಂದ ಪ್ರೇರಿತವಾದ ಒಂದು ಪರಸ್ಪರ "ಅನುಕೂಲಕರ ವ್ಯೂಹಾತ್ಮಕ ಮೈತ್ರಿ" ಆಗಿತ್ತು (Stein, 1989). ಈ ಮೈತ್ರಿಯು ವಿಜಯನಗರಕ್ಕೆ ದಖನ್‌ನಲ್ಲಿ ಮಿಲಿಟರಿ ಶ್ರೇಷ್ಠತೆಯನ್ನು ತಂದುಕೊಟ್ಟರೆ, ಪೋರ್ಚುಗೀಸರ 'ಎಸ್ಟಾಡೊ ಡಾ ಇಂಡಿಯಾ' ಆಡಳಿತಕ್ಕೆ ಹಿಂದೂ ಮಹಾಸಾಗರದಲ್ಲಿ ಆರ್ಥಿಕ ಸ್ಥಿರತೆಯನ್ನು ಒದಗಿಸಿತು (Subrahmanyam, 2012).

ಕ್ರಿ.ಶ. 1565ರ ತಾಳಿಕೋಟೆ (ರಕ್ಕಸ-ತಂಗಡಿ) ಕದನದ ನಂತರ ವಿಜಯನಗರ

ಸಾಮ್ರಾಜ್ಯದ ಪತನವಾದಾಗ, ಪೋರ್ಚುಗೀಸರ ವಾಣಿಜ್ಯ ಸಾಮ್ರಾಜ್ಯಕ್ಕೂ ಭಾರಿ ಹಿನ್ನಡೆಯಾಯಿತು. ಇದರ ಜೊತೆಗೆ ಪೋರ್ಚುಗೀಸರ ಸಾಮ್ರಾಜ್ಯ ತಾತ್ಕಾಲಿಕವಾಗಿ ಸ್ಪೇನ್ ಸಾಮ್ರಾಜ್ಯದೊಂದಿಗೆ ವಿಲೀನ, ಡಚ್ಚರ ಸ್ಪರ್ಧೆ ಮತ್ತು ಇಂಗ್ಲಿಷರ ಏಳಿಗೆ ಹಾಗೂ ವಿಜಯನಗರದೊಂದಿಗಿನ ಕುದುರೆ ವ್ಯಾಪಾರ ಮತ್ತು ಆಮದು-ರಫ್ತುಗಳು ಸಂಪೂರ್ಣವಾಗಿ ನಿಂತುಹೋದ ಪರಿಣಾಮ, ಪೋರ್ಚುಗೀಸರ ಜಾಗತಿಕ ಆರ್ಥಿಕ ಶಕ್ತಿಯು ಕ್ಷೀಣಿಸಿ, ಅವರ ಬಲವು ಕೇವಲ ಗೋವಾ ಪ್ರಾಂತ್ಯಕ್ಕೆ ಮಾತ್ರ ಸೀಮಿತವಾಗುವಂತಾಯಿತು (Subrahmanyam, 2012). ಒಟ್ಟಾರೆಯಾಗಿ, ಕರ್ನಾಟಕದ ಈ ಹೆಮ್ಮೆಯ ಸಾಮ್ರಾಜ್ಯದ ಇತಿಹಾಸವನ್ನು ಜಾಗತಿಕ ಮಟ್ಟಕ್ಕೆ ಪರಿಚಯಿಸುವಲ್ಲಿ ಪೋರ್ಚುಗೀಸ್ ಮೂಲಗಳು ಇಂದಿಗೂ ಅತ್ಯಮೂಲ್ಯ ಆಧಾರಗಳಾಗಿ ಉಳಿದಿವೆ.

**ಪರಾಮರ್ಶನ ಗ್ರಂಥಗಳು:**

1. A. L. Dallapiccola & A. Verghese, (2000), History and Culture: Vijayanagara, New Delhi: Oxford University Press.
2. R. R. Diwakar, (1968), Karnataka Through the Ages, Bangalore: Government of Mysore.
3. Suryanath U. Kamath, (2020), A Concise History of Karnataka, Bangalore: MCC Publications.
4. R. Sewell, (1900), A Forgotten Empire (Vijayanagar): A Contribution to the History of India, London: Swan Sonnenschein.
5. B. Stein, (1989), The New Cambridge History of India: Vijayanagara, Cambridge: Cambridge University Press.
6. S. Subrahmanyam, (2012), The Portuguese Empire in Asia 1500–1700: A Political and Economic History, West Sussex: Wiley–Blackwell.
7. ಫಾಲಾಕ್ಷ, (2018), ಸಮಗ್ರ ಕರ್ನಾಟಕದ ಇತಿಹಾಸ, ತಿಪಟೂರು: ತರಳು ಪ್ರಕಾಶನ.
8. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, (1970), ಕರ್ನಾಟಕದ ಪರಂಪರೆ – ಸಂಪುಟ 2, ಬೆಂಗಳೂರು: ಕರ್ನಾಟಕ ಸರ್ಕಾರ.
9. Dr. B. A. Saletore, (1934), Social and Political Life in the Vijayanagara Empire (1346–1646 CE), Madras: B. G. Paul & Company.
10. Dr. B. A. Saletore, (1956), Karnataka's Trans–Oceanic Contacts, Dharwad: Karnatak University.
11. K. A. Nilakanta Sastri, (1946), Further Sources of Vijayanagara History, Madras: University of Madras.
12. B. R. Gopal, (1985), Vijayanagara Inscriptions (Volume I and II), Mysore: Directorate of Archaeology and Museums, Government of Karnataka.
13. Archaeological Survey of India (ASI), (1941), South Indian Inscriptions Vol 4 and 9 (Part–II), Madras: Archaeological Survey of India.